ಸ್ವಭಾವ ನಿಮಗೆ ಗೋಚರವಾಗುವುದು. ಬಲಗೈಲಿ ಕೊಟ್ಟಿದ್ದು ಎಡಗೈಗೂ ಗೊತ್ತಾಗಬಾರದು ಎಂಬ ಮಾತನ್ನು ನೀವು ಕೇಳಿಯೇ ಇರುತ್ತೀರಿ. ಆದರೆ ಅವರದು ಇದಕ್ಕೂ ಮೀರಿದ, 'ನಾನು ಕೊಟ್ಟಿದ್ದು ನನ್ನೊಳಗಿರುವ ಆತ್ಮನಿಗೂ ಗೊತ್ತಾಗಬಾರದು' ಎಂಬಂತಹ ಸ್ವಭಾವ. ಹಾಗಾಗಿ ಅವರು ತಮ್ಮ ಬಗ್ಗೆ ಮಾತನಾಡಿಕೊಳ್ಳುವುದೇ ಇಲ್ಲ. 'ತನ್ನ ಬಗ್ಗೆ ತಾನು ಮಾತನಾಡಿಕೊಂಡರೆ ತನ್ನೊಳಗಿರುವ ಆತ್ಮನಿಗೆಲ್ಲಿ ಅದು ಗೊತ್ತಾಗುತ್ತದೋ' ಎಂದೇ ಭಾವಿಸಿ ಮಾತನಾಡುತ್ತಾರೆ. ಹಾಗೆಯೇ ನಡೆದುಕೊಳ್ಳುತ್ತಾರೆ.

ಅಂತಹ ಅಪ್ಪಯ್ಯನ ಆತಿಥ್ಯವನ್ನು ಪಡೆದ ಕೆಲವರು 'ತಮ್ಮ ಬಗ್ಗೆ ಹೇಳಿಕೊಳ್ಳದೇ ಇರುವ ಅವರ ಸ್ವಭಾವವನ್ನು ಕಂಡು ಇವನಿಗೆ ಎಲ್ಲೋ ನಿಧಿ ಅಥವಾ ಕಳ್ಳ ಹಣ ಸಿಕ್ಕಿದೆ. ಅದನ್ನು ಖರ್ಚು ಮಾಡಲಿಕ್ಕೋಸ್ಕರ ನಮ್ಮಂತಹವರನ್ನು ಕರೆದುಕೊಂಡು ಬಂದು ಪುಕ್ಕಟೆಯಾಗಿ ಉಪಚರಿಸುತ್ತಾನೆ ಎಂದು ಅವರ ಬೆನ್ನ ಹಿಂದೆ ಮಾತನಾಡಿದ್ದೂ ಇದೆ. ಆದರೂ ಅಪ್ಪಯ್ಯ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ನನಗೆ ಇವರನ್ನು ಕರೆತರಬೇಕು ಎನ್ನಿಸಿತು. ಕರೆತಂದೆ. ಅವರು ನನ್ನ ಉಪಚಾರವನ್ನು ಅಂಗೀಕರಿಸುತ್ತಾರೋ ಇಲ್ಲವೋ ಎಂಬುದು ನನಗೆ ಸಂಬಂಧಿಸಿದ ವಿಚಾರವಲ್ಲ ಎಂದು ಅಂದು ಕೊಳ್ಳುತ್ತಾರೆ. ಆದರೆ ತನ್ನ ಮನಸ್ಸಿಗೆ ಒಪ್ಪುವವರು ಯಾರಾದರೂ ಸಿಕ್ಕುತ್ತಾರೋ ಎಂದು ಹುಡುಕುತ್ತಲೇ ಇರುತ್ತಾರೆ. ಮನವೊಪ್ಪುವವರನ್ನು ಕರೆತರುತ್ತಾರೆ. ಉಪಚರಿಸುತ್ತಾರೆ. ಕಳಿಸುತ್ತಾರೆ. ತಾವು ಕಳೆದು ಕೊಂಡಿದ್ದನ್ನು ಮನೆಗೆ ಬಂದವರ ಮೂಲಕ ಗಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅದರಂತೆಯೇ ನಡೆದುಕೊಳ್ಳುತ್ತಾರೆ.

* * *

ನನ್ನ ಅಪ್ಪ- ಅಮ್ಮ ಸಹ ಇವರಲ್ಲಿಗೆ ಬಂದು ಏನನ್ನೂ ಕೇಳುವುದಿಲ್ಲ. ಅಲ್ಲಿ ತೋಟದಲ್ಲಿ ಏನು ಬೆಳೆದಿರುತ್ತದೋ ಅದನ್ನೇ ಬಳಸಿಕೊಂಡು ಜೀವನ ಸಾಗಿಸುತ್ತಾರೆ. ನನಗೂ ಇಬ್ಬರು ತಮ್ಮಂದಿರಿದ್ದಾರೆ. ಅವರನ್ನು ಓದಿಸುವ ಹೊಣೆಯನ್ನೂ ಇವರೇ ನೋಡಿ ಕೊಳ್ಳುತ್ತಾರೆ. ನೀವು ಬಂದಿರಲ್ಲ ಹೀಗೆ ಬಂದು, ನಿಂದು, ಉಂಡು, ಹರಸಿ, ಹಾರೈಸಿ ಹೋಗುವವರು ವರ್ಷದಲ್ಲಿ ಐದೋ ಆರು ಕುಟುಂಬಗಳು ಆಗಬಹುದು. ಉಳಿದಂತೆ ನಾನು ಮತ್ತು ಅಪ್ಪಯ್ಯ ಮತ್ತು ನನ್ನ ಸ್ನೇಹಿತರು, ಅಕ್ಕಪಕ್ಕದ ಮನೆಯವರು. ಓಣಿಯವರು ಹೊರತುಪಡಿಸಿ ಮತ್ತೇನೂ ಇಲ್ಲ ಎಂದು ಹೇಳಿದಳು ಶಾರ್ವರಿ.

* * *

ನಾವು ನಮ್ಮ ಕ್ಷೇತ್ರದರ್ಶನ ಮುಗಿಸಿಕೊಂಡು ಬಂದು ನಾಲ್ಕೈದು ತಿಂಗಳು ಕಳೆದಿರಬಹುದು. ಒಂದು ದಿನ ನಮ್ಮ ಫೋನಿಗೆ ಒಂದು ಸಂದೇಶ ಬಂತು.

ಅದರ ಸಾರಾಂಶವೇನೆಂದರೆ, 'ಅಪ್ಪಯ್ಯ ಈಗ್ಗೆ ನಾಲ್ಕು ದಿನಗಳ ಹಿಂದೆ ಹೋಗಿಬಿಟ್ಟರು. ಅವರ ಶವಸಂಸ್ಕಾರವನ್ನು ನಾನೇ ನೆರವೇರಿಸಿದೆ. ಅವರು ಉಯಿಲೊಂದನ್ನು ಬರೆದಿಟ್ಟಿದ್ದರು. ಅದರಲ್ಲಿ ನಾನು ಸತ್ತರೆ ನನ್ನ ದೇಹವನ್ನು ಆಸ್ಪತ್ರೆಗೆ ಕೊಂಡೊಯ್ದು ತಂಗಳು ಮಾಡಬೇಡಿ. ಮಕ್ಕಳಿಗೆ ನಾನು ಸತ್ತ ವಿಷಯವನ್ನಷ್ಟೇ ತಿಳಿಸಿ. ಅವರ ಬರುವಿಕೆಗಾಗಿ ಕಾಯಬೇಡಿ. ಇಲ್ಲಿಯೇ ಹತ್ತಿರದಲ್ಲಿರುವ ಅತಿಥಿಗಳಿಗೆ ತಿಳಿಸಿ. ದೂರದ ಊರುಗಳ ಅತಿಥಿಗಳಿಗೆ ಈ ವಿಚಾರವನ್ನು ಅಂದೇ ತಿಳಿಸಿ ತೊಂದರೆ ಕೊಡಬೇಡಿ. ಅಕ್ಕಪಕ್ಕದವರಿಗೆ ಕಿರಿಕಿರಿಯಾಗದಂತೆ ನನ್ನ ಶವಸಂಸ್ಕಾರವನ್ನು ಮುಗಿಸಿ. ಈ ಎಲ್ಲವನ್ನು ಪುಟ್ಟಿಯೇ ಮಾಡುವುದು. ವಿಷಯ ತಿಳಿದು ಮಕ್ಕಳು ಬಂದರೆ ಸರಿ. ಇಲ್ಲವಾದರೆ ಎಲ್ಲ ಕಾರ್ಯಗಳನ್ನು ಪುಟ್ಟಿಯೇ ನೆರವೇರಿಸುವುದು. ಪುಟ್ಟಿ, ಈಗಿರುವ ಮನೆಯನ್ನು ಮುಂದೆಯೂ ಅತಿಥಿಗೃಹವಾಗಿ ಇರುವಂತೆ ನೋಡಿಕೊಳ್ಳುವುದು. ಇದಕ್ಕೆ ಅಗತ್ಯವಿರುವ ಎಲ್ಲ ವ್ಯವಸ್ಥೆಯನ್ನೂ ನಾನು ಮಾಡಿದ್ದೇನೆ. ಪುಟ್ಟಿಯ ತಂದೆ- ತಾಯಿಯರು ತಮಗೆ ಇಷ್ಟವಾದರೆ ಇಲ್ಲಿಗೆ ಬಂದು ಇರುವುದು. ಅತಿಥಿಗಳ ಸತ್ಕಾರವನ್ನು ನೋಡಿಕೊಳ್ಳುವುದು. ಇನ್ನೊಬ್ಬರನ್ನು ಖುಷಿ ಪಡಿಸುವುದರಲ್ಲಿ ಇರುವ ಸುಖ ಎಂಥದೆಂಬುದು ನನಗೆ ತಿಳಿದಿದೆ. ಮನದೊಳಗಿನ ಮೋಹವೆಂಬುದು ನಮ್ಮನ್ನು ಹೇಗೆ ಸುಡುತ್ತದೆ ಎಂಬುದೂ ನನಗೆ ತಿಳಿದಿದೆ' ಎಂಬ ಒಕ್ಕಣೆ ಅದರಲ್ಲಿತ್ತು. ●